2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 105/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಚೇತನ್ | ಪಿಡಬ್ಲೂ -9 |
| ತಂದೆಯ ಹೆಸರು | - | ಹನುಮಂತಪ್ಪ | ಸಿಡಬ್ಲೂ -17 |
| ವಯಸ್ಸು | - | 28 ವರ್ಷ | |
| ಉದ್ಯೋಗ | - | ಪೇಂಟಿಂಗ್ ಕೆಲಸ | |
| ವಾಸ ಸ್ಥಳ | - | ದುಮ್ಮಿ, ಹೊಳಲ್ಕೆರೆ ತಾಲ್ಲೂಕು | |

ದಿನಾಂಕಃ 20.04.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತರು ಯಾರೆಂದು ನನಗೆ ಗೊತ್ತಿಲ್ಲ. ನಾನು ಅವರನ್ನು ನೋಡಿಲ್ಲ. ಪಿರ್ಯಾದಿ ಗೊತ್ತಿಲ್ಲ. ಸಹ ಪಂಚರಾದ ಚಾಸಾ.16 ಗೊತ್ತಿಲ್ಲ. ಮೃತ ಲತಾ ಗೊತ್ತಿಲ್ಲ.
2. ಸಾಕ್ಷಿಯು ಈಗಾಗಲೇ ನಿಪಿ.12 ಎಂದು ಗುರುತಿಸಲ್ಪಟ್ಟಿರುವ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.12(ಬಿ) ಎಂದು ಗುರುತಿಸಲಾಯಿತು.
3. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ನಿಪಿ.12 ಪಂಚನಾಮೆಗೆ ಸಹಕರಿಸುವಂತೆ ಪೊಲೀಸರು ಸಾಕ್ಷಿಗೆ ನೀಡಿದ್ದಾರೆ ಎಂದು ಹೇಳಲಾದ ನೋಟೀಸಾಗಿದ್ದು ಅದನ್ನು ನಿಪಿ.35 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.35(ಎ) ಎಂದು ಗುರುತಿಸಲಾಯಿತು.

4. ಈಗ್ಗೆ 2-3 ವರ್ಷಗಳ ಹಿಂದೆ ಒಂದು ದಿನ ನಾನು ಅಜ್ಜಂಪುರದಲ್ಲಿ ಪೇಂಟ್ ಕೆಲಸಕ್ಕಾಗಿ ನಡೆದುಕೊಂಡು ಹೋಗುತ್ತಿದ್ದ ಸಮಯದಲ್ಲಿ ಅಜ್ಜಂಪುರ ಪೊಲೀಸರು ಸಹಿ ಮಾಡಿ ಎಂದು ಹೇಳಿದ ಮೆರೆಗೆ ಸದರಿ ದಾಖಲೆಗಳಿಗೆ ಸಹಿ ಮಾಡಿದ್ದೇನೆ. ಆದರೆ ಯಾವ ವಿಚಾರಕ್ಕೆಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿರುವ ದಾಖಲೆಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಮತ್ತು ಅದನ್ನು ಪೊಲೀಸರು ನನಗೆ ಓದಿ ಹೇಳಿಲ್ಲ. ಸದರಿ ದಾಖಲೆಗೆ ನನ್ನನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿಲ್ಲ ಮತ್ತು ಏನನ್ನೂ ಅಮಾನತುಪಡಿಸಿಕೊಂಡಿಲ್ಲ.

5. ಸಾಕ್ಷಿಯು ಈಗಾಗಲೇ ನಿಪಿ.13 ಎಂದು ಗುರುತಿಸಲ್ಪಟ್ಟಿರುವ ಫೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದನ್ನು ಅಜ್ಜಂಪುರ ಪೊಲೀಸ್ ಠಾಣೆಯಲ್ಲಿ ಪೊಲೀಸರು ತೆಗೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ಪೊಲೀಸರು ಯಾವ ವಿಚಾರಕ್ಕೆ ತೆಗೆದುಕೊಂಡರು ಮತ್ತು ಅದರಲ್ಲಿ ಕಂಡು ಬರುವ ವ್ಯಕ್ತಿಗಳು ಯಾರೆಂದು ನನಗೆ ಗೊತ್ತಿಲ್ಲ.

6. ಸಾಕ್ಷಿಯು ಈಗಾಗಲೇ ನಿಪಿ22 ಎಂದು ಗುರುತಿಸಲ್ಪಟ್ಟಿರುವ ನೋಟ್ ಪುಸಕ್ತದಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ.22(ಸಿ) ಮತ್ತು ನಿಪಿ.22(ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಮೇಲೆ ಹೇಳಿದಂತೆ ಪೊಲೀಸರು ಠಾಣೆಯಲ್ಲಿ ಫೋಟೋ ತೆಗೆದುಕೊಂಡ ಸಮಯದಲ್ಲಿ ಮಾಡಿದ್ದೇನೆ. ಸದರಿ ಪುಸ್ತಕವನ್ನು ಯಾರು

ಪೊಲೀಸರಿಗೆ ಕೊಟ್ಟರು ಮತ್ತು ಅದು ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

7. ದಿನಾಂಕ 14.05.2019 ರಂದು ಪಂಚನಾಮೆಯನ್ನು ಜರುಗಿಸುವ ಸಲುವಾಗಿ ಪೊಲೀಸರು ನಿಮಗೆ ಮತ್ತು ಚಾಸಾ.16 ರವರಿಗೆ ನಿಪಿ.35 ರಂತೆ ನೋಟೀಸನ್ನು ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ಅದರಂತೆ ನೀವು ಬೆಳಿಗ್ಗೆ 10.00 ಗಂಟೆಗೆ ತರೀಕೆರೆ ಪೊಲೀಸ್ ಉಪಾಧೀಕ್ಷಕರ ಕಚೇರಿಯಲ್ಲಿ ಹಾಜರಾಗಿದ್ದಿರಿ ಎಂದರೆ ಸರಿಯಲ್ಲ. ಆಗ ಪ್ರಾಸಾ.1 ರವರು ತಮ್ಮ ಮಗಳು ಲತಾ ರವರ ಕೊಲೆಯ ವಿಚಾರದಲ್ಲಿ ಸದರಿ ಲತಾ ಒಂದನೇ ವರ್ಷದ ಬಿ ಕಾಂ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಆಕೆ ಬಳಸಿ ಬರೆದಿರುವ ಒಂದು ಲಾಂಗ್ ನೋಟ್ ಪುಸ್ತಕ ಮತ್ತು ಆಕೆ 1 ನೇ ಆರೋಪಿಯೊಂದಿಗೆ ಮದುವೆಯಾದ ಬಗ್ಗೆ ತೆಗೆದ 4 ಫೋಟೋಗಳನ್ನು ಪ್ರಾಸಾ.1 ರವರು ನನ್ನ ಮತ್ತು ಚಾಸಾ.16 ರವರ ಸಮಕ್ಷಮ ಪೊಲೀಸರಿಗೆ ಹಾಜರುಪಡಿಸಿದರು ಎಂದರೆ ಸರಿಯಲ್ಲ. ಅವುಗಳನ್ನು ಪೊಲೀಸರು ನಿಪಿ.12 ರಂತೆ ಪಂಚನಾಮೆಯನ್ನು ಜರುಗಿಸಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ.13 ಫೋಟೋವನ್ನು ತೆಗೆದುಕೊಳ್ಳಲಾಯಿತು ಮತ್ತು ಈಗಾಗಲೇ ನಿಪಿ.22 ಎಂದು ಗುರುತಿಸಲ್ಪಟ್ಟಿರುವ ನೋಟ್ ಪುಸ್ತಕದಲ್ಲಿರುವ ಬರವಣಿಗೆ ತನ್ನ

ಮಗಳು ಲತಾಳದ್ದು ಎಂದು ಫ್ರಾಸಾ.1 ರವರು ತೋರಿಸಿ ಗುರುತಿಸಿದ ಮೇರೆಗೆ ಸದರಿ ನೋಟ್ ಪುಸ್ತಕದ ಮೇಲೆ ನನ್ನ ಸಹಿಗಳನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಫ್ರಾಸಾ.1 ರವರು ಹಾಜರುಪಡಿಸಿದ ಮೃತ ಲತಾ ಮತ್ತು 1 ನೇ ಆರೋಪಿ ಮದುವೆಯಾದ ಬಗ್ಗೆ ಹಾಜರುಪಡಿಸಿದ ನಿಪಿ.14 ರಿಂದ ನಿಪಿ.17 ಎಂದು ಗುರುತಿಸಲ್ಪಟ್ಟಿರುವ ಫೋಟೋಗಳನ್ನು ನೋಡಿ ಗುರುತಿಸಿರುತ್ತೀರಿ ಎಂದರೆ ಸರಿಯಲ್ಲ.

8. ಘಟನೆಯ ಬಗ್ಗೆ ಮಾಹಿತಿ ಇದ್ದು ಪೊಲೀಸರು ನಿಮ್ಮ ಸಮಕ್ಷಮ ನಿಪಿ.12 ರಂತೆ ಪಂಚನಾಮೆಯನ್ನು ಜರುಗಿಸಿದ್ದು, ನಿಪಿ.13 ರಂತೆ ಫೋಟೋವನ್ನು ತೆಗೆದುಕೊಂಡು, ನಿಮ್ಮ ಸಮಕ್ಷಮ ನಿಪಿ.22 ನೋಟ್ ಪುಸ್ತಕವನ್ನು ಅಮಾನತುಪಡಿಸಿಕೊಂಡಿದ್ದರೂ ಸಹ ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.